Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



Rtn. Francesco Arezzo
RI President



Rtn. Palaksha K.
Dist. Governor



Rtn. PHF. I. Narayana
Asst. Governor



Rtn. Koushik Yadiyal
Zonal Lieutenant




40h year of Service and Fellowship

Volume 40 Issue - 41 16th April 2026

## Club Assembly and Board of Directors Meeting

Time : 7.00 p.m.
Venue : Hotel Shivaprasad Grand, Kundapura



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

# ಸಂಪಾದಕೀಯ :



ನನ್ನೊಲವಿನ ರೋಟರಿ ಮಿತ್ರರೇ

ನನ್ನ ಒಲವಿನ ರೋಟರಿ ಮಿತ್ರರೇ, ಇಂದಿನ ದಿನಗಳಲ್ಲಿ ರೋಟರಿ ವಾರದ ಸಭೆಗೆ ಸದಸ್ಯರುಗಳನ್ನು ಆಹ್ವಾನಿಸುವುದು ಹಾಗೂ ಸಭೆಗಳಲ್ಲಿ ಆಧಿಕ ಹಾಜರಾತಿ ಕಾಪಾಡುವುದೇ ದೊಡ್ಡ ಸವಾಲಾಗಿದೆ!. ನಮ್ಮ ಪಿ.ಡಿ.ಜಿ. ಅಭಿನಂದನ್ ಶೆಟ್ಟಿ ಅವರು ತಮ್ಮ ಮುಖ್ಯ ಭಾಷಣ ಗಳಲ್ಲಿ ಹೇಳುವುದುಂಟು "ರೋಟರಿ ನಡೆಯುತ್ತಿರುವುದು ಹೇಗೆ? ಯಶಸ್ವೀ ರೋಟರಿ ಪಯಣ ಯಾವುದರ ಮೇಲೆ ಅವಲಂಭಿತವಾಗಿದೆ? ಅಂದರೆ ಈ ಜಗತ್ತಿನ ಪ್ರತೀ ರೋಟರಿಯು ಯಶ್ಸ್ವಿಯಾಗಿ ನಡೆಯುತ್ತಿರುವುದು ಆ ಕ್ಲಬ್ಬಿನಲ್ಲಿ ವಾರ ವಾರವು ನಡೆಯುವ ಸರ್ವ ಸದಸ್ಯರುಗಳಿಂದ ಕೂಡಿರುವ ಸಾಮಾನ್ಯ ಸಭೆಗಳಿಂದ ಅಂದರೆ ಪ್ರತೀ ಸದಸ್ಯನು ವಾರದ ಸಾಮಾನ್ಯ ಸಭೆಗೆ ಹಾಜರಾಗುವುದು ಅತಿ ಮುಖ್ಯ ಎಂಬ ವಿಚಾರವನ್ನು ಮನ ಮುಟ್ಟುವಂತೆ ತಿಳಿಸುತ್ತಿದ್ದರು. ಈ ಮೊದಲು ನಾವು ರೋಟರ್‍ಯಾಕ್ಟ್‌ನಲ್ಲಿ ಇರುವಾಗ ಸಭೆಗೆ ವರುಷದ ಮುಕ್ಕಾಲು ಪಾಲು ಸಭೆಗಳು 100% ಹಾಜರಾತಿ ಇರುತ್ತಿತ್ತು. ಸಭೆಗೆ ಹಾಜರಾಗುವ ಲವಲವಿಕೆಯೇ ಬೇರೆ ಅಧ್ಯಕ್ಷ ಫೋನ್ ಮಾಡಬೇಕೆಂಬ ನಿಯಮವೇ ಇರಲಿಲ್ಲ. ನಮ್ಮ ರೋಟರಿಯಲ್ಲೂ ಸಹ ಈ ಮೊದಲು ಹಲವು ವರುಷ ಸದಸ್ಯರು ಎಷ್ಟು ಹರುಷದಿಂದ ಸಭೆಗೆ ಹಾಜರಾಗುತ್ತಿದ್ದರು. ಅತಿಥಿಗಳ ಸಭೆಯಂತೂ ತಮ್ಮೊಡನೆ ತಮ್ಮ ಕುಟುಂಬ ಸದಸ್ಯರನ್ನೂ ಕರೆತರುತ್ತಿದ್ದರು. ಅದು ನೋಡಲೇ ಆನಂದ. ಸಭೆಗಳಂತೂ ವಿವಿಧತೆಗಳಿಂದ ಕೂಡಿರುತ್ತಿತ್ತು. ಇಂದಿಗೂ ಸವಿನೆನಪು. ಆದರೆ ಇಂದೇನಾಗಿದೆ ಸಭೆ ಮಳೆಗಾಲದಲ್ಲಿ 50% ಹಾಜರಾತಿ. ನಂತರ ನಂತರ ಅಧ್ಯಕ್ಷ ಕಾರ್ಯದರ್ಶಿಗಳಿಗೆ ಫೋನ್ ಮಾಡಿಯೇ ಬೇಸರ ಬರುವಷ್ಟಾಗಿದೆ. ಕೆಲವು ಸಭೆಗಳಲ್ಲಿ ಅತಿಥಿಗಳನ್ನು ಕರೆಸಿದಾಗಲು ಒತ್ತಾಯದಿಂದ ಆಗಮಿಸಿರುವ 14, 15 ಹೆಚ್ಚೆಂದರೆ 18 ಸದಸ್ಯರು ಇರುವುದಾಗುತ್ತಿದೆ. ಮಿತ್ರರೇ ಈ ಯುಗಾದಿಯಿಂದಾದರೂ ನಮ್ಮ ರೋಟರಿಗೆ ಹೊಸತನವು ಬರಲಿ ಇನ್ನಾದರೂ ನಾವು ನಮ್ಮ ರೋಟರಿ ಸಭೆಗೆ ಅಧಿಕ ಸಂಖ್ಯೆಗಳಲ್ಲಿ ಹಾಜರಾಗೋಣ ನಮ್ಮ ರೋಟರಿ ಶಕ್ತಿಯುತ ರೋಟರಿಯಾಗಿ ಮೂಡಿಬರಲಿ ಎಂದು ಹಾರೈಸುತ್ತಾ ಸರ್ವರಿಗೂ ಯುಗಾದಿ ಶುಭಾಷಯಗಳು.

**– ರೊ. ರಮಾನಂದ ಕಾರಂತ**

---

## ವಾರದ ವರದಿ




ತಾರೀಕು 9 ಏಪ್ರಿಲ್ 2026ರಂದು ನಡೆದ ನಮ್ಮ ವಾರದ ಸಭೆಯು Impression on Governor official Visit ವಿಚಾರದಲ್ಲಿ ನಮ್ಮ ಕ್ಲಬ್ಬಿನ ಹಿರಿಯ ಸದಸ್ಯರುಗಳಾದ ರೊ. ಡಾ. ಉಮೇಶ್ ಪುತ್ರನ್, ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ, ರೊ. ಸತ್ಯನಾರಾಯಣ ಪುರಾಣಿಕ್, ರೊ. ಜುಡಿತ್ ಮೆಂಡೋನ್ಸಾ ಹಾಗೂ ರೊ. ಪ್ರಕಾಶ್ ಶೆಟ್ಟಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಆಗಮಿಸಿದ ಸರ್ವರನ್ನು ಅಧ್ಯಕ್ಷ ರೊ. ಸಚಿನ್ ನಕ್ಕತಾಯ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸ್ತಾ ವಾರದ ವರದಿ ವಾಚಿಸಿದರು. ರೊ. ಶ್ರೀನಿವಾಸ ಶೇಟ್ ಅವರು ಪ್ರಾರ್ಥನೆಯನ್ನು ನಡೆಸಿಕೊಟ್ಟರು. ರೊ. ಸೀತಾರಾಮ ನಕ್ಕತ್ತಾಯ ವಾರದ ಚಿಂತನೆ ಮಂಡಿಸಿದರು. ರೊ. ವಾಸುದೇವ ಕಾರಂತ್ ರೋಟರಿ ಮಾಹಿತಿ ತಿಳಿಸಿದರು. ರೊ. ಸುಮಾ ಪುತ್ರನ್ ಕಾರ್ಯಕ್ರಮದ ಕೊನೆಯಲ್ಲಿ ಹಾಸ್ಯವನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ 2027–28 ರ ಸಾಲಿನ ಅಧ್ಯಕ್ಷರಾಗಿ ರೊ. ಭರತ್ ಶೆಟ್ಟಿ ಹಾಗೂ ಕಾರ್ಯದರ್ಶಿ ಆಗಿ ರೊ. ಅನಿಲ್ ಡಿಸಿಲ್ವಾ ಆಯ್ಕೆ ಆಗಿರುತ್ತಾರೆ. ಮುಂದಿನ ವರುಷದ ಅಧ್ಯಕ್ಷರಾದ ರೊ. ಡಾ. ಆದರ್ಶ ಹೆಬ್ಬಾರ್ ತಾವು ಭಾಗವಹಿಸಿದ PELS ಹಾಗೂ SELS ತರಬೇತಿ ಶಿಬಿರದ ಅನುಭವವನ್ನು ತಿಳಿಸಿದರು. ರೊ. ಪ್ರಕಾಶ್ ಶೆಟ್ಟಿ ವಂದನಾರ್ಪಣೆ ಸಲ್ಲಿಸಿದರು.

---




**Rtn. PDG PHF Abhinandan A Shetty Adress the District seminar Preserve Planet Earth at Hassan.**

---

## Congratulations to

### Rtn. Abhinandan Shetty and Ann Neetha Shetty

# OAK WOOD INDIAN SCHOOL KUNDAPURA

**100%**

**proudly celebrates consistent academic excellence!**

**Achieving 100% First Class results for three consecutive years is a reflection of students' dedication, teachers' commitment and strong academic foundation.**

---

## ಮಾನವ ಜೀವನದಲ್ಲಿ ವೇದಾಂತದ ಅವಶ್ಯಕತೆ

ನಮ್ಮ ಇವತ್ತಿನ ಇಂದ್ರಿಯಬಂಧ ಅಸ್ತಿತ್ವವು ಹೇಗಿದೆಯೆಂದರೆ ನಮ್ಮಲ್ಲಿ ಕಿಂಚಿತ್ತೂ ಮಾನವ ಲಕ್ಷಣ, ಮಾನವೀಯತೆಯಿಲ್ಲ. ನಾವು ಮಾನವೀಯತೆ ಹೊಂದಲು ಪರಿಗಣಿಸಲ್ಪಟ್ಟ ಅಭ್ಯರ್ಥಿಗಳು ಎನ್ನಬಹುದು. ಹೆಚ್ಚಿನವರು ಭ್ರಾಂತಿಯಲ್ಲಿದ್ದಾರೆ. ಅವರು ಆಧುನಿಕ ಶಿಕ್ಷಣ ಹೊಂದಿ ವಿದ್ಯಾವಂತ ರಾಗಿರಬಹುದು, ಆದರೆ ಅವರ ಜೀವನವು ತಮ್ಮ ನೈಜ ಸ್ವರೂಪದ ಅಜ್ಞಾನ ದಿಂದ ಭ್ರಷ್ಟಾಚಾರ, ಹಿಂಸೆ, ಅಪರಾಧಗಳ ಕಪ್ಪುಚುಕ್ಕೆಗಳನ್ನು ಪ್ರದರ್ಶಿಸುತ್ತವೆ. ಅವರಿಗೆ ನಿಜವಾದ ಅರ್ಥದಲ್ಲಿ ಪುನಃ ಶಿಕ್ಷಣದ ಮೂಲಕ ಸಂಮೋಹನದಿಂದ ಆಚೆ ಬರುವ ಅವಶ್ಯ ವಿದೆ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ವೇದಾಂತವನ್ನು ಸಂಮೋಹನ ರಹಿತ ರನ್ನಾಗಿ ಮಾಡುವ ಸಾಧನ ಎಂದು ಕರೆದಿದ್ದಾರೆ. ಮನುಷ್ಯರು ಅವರೊಳಗಿರುವ ದೈವತ್ವದ ಸಾಧ್ಯತೆಯ ಸಣ್ಣ ಸುಳಿವನ್ನೂ ಅರಿಯದೆ, ತಾವು ಕೇವಲ ಗಂಡು, ಹೆಣ್ಣು, ಶ್ರೀಮಂತ, ಬಡವ, ಹಿಂದು, ಮುಸ್ಲಿಂ, ಕ್ರಿಶ್ಚಿಯನ್, ಬಿಳಿಯ, ಕರಿಯ ಹೀಗೆಂದು ಕೊಂಡು ಭ್ರಾಂತಿಯಲ್ಲಿದ್ದು ಸಂಮೋಹನಕ್ಕೊಳಗಾಗಿದ್ದಾರೆ. ಅವರಲ್ಲಿರುವ ದೈವೀಶಕ್ತಿಯೇ ಅವರ ನೈಜ ವ್ಯಕ್ತಿತ್ವ ಎಂಬುದನ್ನೂ ಅರಿಯಲಾರರಾಗಿದ್ದಾರೆ. ನಮ್ಮೊಳಗೇ ಅಡಕವಾಗಿರುವ ನೈಜ ವಾಸ್ತವ ವನ್ನು ತಿಳಿಯದ ಈ ಜೀವನ ಎಂತಹ ಮೂರ್ಖ ಜೀವನ!!

ಮನುಷ್ಯನಾಗಿ ಜನಿಸಿ ಆ ದೇಹವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸದಿದ್ದರೆ, ಇಂದ್ರಿಯಗಳ ಗುಲಾಮರಾಗಿ ಜೀವಿಸಿದರೆ ಅತ ನಿಜವಾದ ಮೂರ್ಖ ಅಥವಾ ಅವಿವೇಕಿ. ಇಂತಹ ಮೂರ್ಖರ ಸಮಸ್ಯೆಯೆಂದರೆ ಅವರು ಪ್ರಂಪಚದಲ್ಲಿ ತಾವೇ ಬುದ್ಧಿವಂತರು ಎಂದುಕೊಂಡಿರುತ್ತಾರೆ. ಜಾನ್ ಸ್ಟುವರ್ಟ್ ಮಿಲ್ ಎಂಬ ಬ್ರಿಟಿಷ್ ಚಿಂತಕ ತನ್ನ ಯುಟಿಲಿಟೇರಿಯನಿಸಮ್ ನಲ್ಲಿ ಹೀಗೆ ಹೇಳಿದ್ದಾನೆ:

"ತೃಪ್ತ ಹಂದಿಗಿಂತಲೂ ಅತೃಪ್ತ ಮಾನವನಾಗಿರುವುದೇ ಉತ್ತಮ. ತೃಪ್ತ ಮೂರ್ಖನಿಗಿಂತಲೂ ಅತೃಪ್ತ ಸಾಕ್ರೆಟೆಸ್ ಉತ್ತಮ. ಈಗ ಹಂದಿ ಅಥವಾ ಮೂರ್ಖ ಬೇರೆ ರೀತಿಯ ಅಭಿಪ್ರಾಯ ಪಟ್ಟರೆ ನಾವು ಅವರವರ ಭಾವ ಎನ್ನಬೇಕಾಗುತ್ತದೆ. ಏಕಂದರೆ ಹಂದಿ ತೃಪ್ತಿಪಡಲು ಅದಕ್ಕೆ ಏನು ಬೇಕು ಎಂಬುದು ಎಲ್ಲರಿಗೂ ತಿಳಿದ ವಿಷಯವೇ." ಹಾಗೆಯೇ ಮೂರ್ಖನೂ ಕೂಡ!

—— ಸ್ವಾಮಿ ರಂಗನಾಥಾನಂದ

## CONGRATULATIONS



**Rtn. Bharath Shetty**
President Elect
2027- 28



**Rtn. Anil D'Silva**
Secretary Elect
2027- 28

